# ಬೊಂಬೆಯಾಗಿಸಯ್ಯ...

ಬೊಂಬೆಯಾಗಿಸಯ್ಯ
ತಂದೆ ಹರನೇ
ಎನ್ನ ಬೊಂಬೆಯಾಗಿಸಯ್ಯ...

ಭಾವನೆಗಳ ಸೆಲೆಗೆ ಬಳುಕದ
ನೆನಪುಗಳ ಅಲೆಗೆ ನಿಲುಕದ
ಸಂಬಂಧಗಳ ಸುಳಿಗೆ ಸಿಲುಕದ
ಸದಾ ಏಕರೂಪ ಭಾವದ
ಬೊಂಬೆಯಾಗಿಸಯ್ಯ...

ಖುಷಿಯಲಿ ಮೇಲೆ ಉಬ್ಬದ ಯಶಸ್ಸು
ದುಃಖದಿ ಕಮರಿ ಕೊರಗದ ಕನಸು
ಲೋಕದ ಘಟನೆಗೆ ಸಮಚಿತ್ತ ಮನಸು
ಬದುಕಿನ ಅರಿವಿಗೆ ಸ್ತಿಮಿತದ ತಪಸ್ಸಿನ
ಬೊಂಬೆಯಾಗಿಸಯ್ಯ...

ಅಸಹಾಯಕತೆಯಲಿ ಮಿಂದಿದೆ ಬದುಕು
ದರ್ಪದ ಅಡಿಯಲಿ ಕೊಸರಿದೆ ಕನಸು
ನಿಂತರೂ ತಳ್ಳುವ ಪಾSSSಪಿ ಜನರು
ಸ್ವಾರ್ಥದಿ ಬದುಕುವ ಜನರ ನಡುವೆ
ಎನ್ನ ಬೊಂಬೆಯಾಗಿಸಯ್ಯ...

ಕಂಡರೂ ನೋಡದ ಕಣ್ಣುಗಳೇಕೆ?
ಕೇಳಿದರೂ ಆಲಿಸದ ಕಿವಿಗಳೇಕೆ?
ಸಹಾಯ ನೀಡದ ಹಸ್ತಗಳೇಕೆ?
ಒಳಿತಿಗೆ ಬಾರದ ಜೀವನವೇಕೆ?
ಎನ್ನ ಬೊಂಬೆಯಾಗಿಸಯ್ಯ...

● **ಅಲಕಾ ಬಿ.ಜಿ., ತೀರ್ಥಹಳ್ಳಿ**

# ನಿತ್ಯ ಹೊಸ ಪಾತ್ರ

ಬಣ್ಣ ಬಣ್ಣದ ಬಟ್ಟೆ ತೊಟ್ಟು,
ನೆತ್ತಿ ಮೇಲೆ ಮುಂದಲೆಯಿಟ್ಟು



ತಲೆಯ ಮೇಲೆ
ಅಂದಚಂದದ ಕಿರೀಟವಿಟ್ಟು
ಶಿಸ್ತಿನ ಸಿಪಾಯಿಗಳಂತೆ ನಿಂತಿದ್ದೇವೆ.
ಕಣ್ತೆರೆದೇ ಇದ್ದರೂ
ಏನನ್ನೂ ನೋಡುತ್ತಿಲ್ಲ,
ಕಿವಿಯಗಲಿಸಿ ಏನನ್ನೂ ಕೇಳಿಸಿಕೊಳ್ಳುತ್ತಿಲ್ಲ
ಮುಗುಳು ನಗುತ್ತಿದ್ದೇವೆ...
ಬಂದೇ ಬರುವ ಸೂತ್ರದಾರ;
ಹಿಡಿವ ಕೈಯಲ್ಲಿ ನಮ್ಮ ದಾರ
ನಾವಾಗುವೆವು ಕೃಷ್ಣ, ರುಕ್ಮಿಣಿ,
ಕಂಸ, ಹಾಸ್ಯಗಾರ...
ಆತ ಕುಣಿಸಿದರಷ್ಟೇ ನಾವು
ಕುಣಿಯುತ್ತೇವೆ
ದಾರ ಬಿಡಿಸಿ, ಪೆಟ್ಟಿಗೆಯಲ್ಲಿರಿಸಿ
ನಾಳೆ ಇನ್ನೊಂದೆಡೆಗೆ
ಅಲ್ಲಿ ಹೊಸ ವೇಷ,
ಹೊಸ ಉಡುಗೆತೊಡುಗೆ...
ಮತ್ತೆ ರಂಗಸ್ಥಳಕ್ಕಿಳಿಯುತ್ತೇವೆ
ಮತ್ತೆ ಹಿಡಿಯುತ್ತಾನೆ ಸೂತ್ರ
ನಮಗೆಲ್ಲ ಹೊಸ ಪಾತ್ರ
ರಾಮ, ಹನುಮ, ಸೀತೆ,
ಹರಿಶ್ಚಂದ್ರ, ವಿಶ್ವಾಮಿತ್ರ...
ಮೇಲಿನವ ಕುಣಿಸಿದಂತೆ
ಕುಣಿಯುತ್ತೇವೆ...

● **ಸವಿತಾ ಎಸ್. ಭಟ್, ಅಡ್ವಾಯಿ**